ಮುಕ್ತ ಪ್ರಪಂಚವೊಂದನ್ನು ಸ್ಥಾಪಿಸಲು ಹಳೆಯ ಸಾಮ್ರಾಜ್ಯಶಾಹಿ ಕಾಲದ ಒಡಂಬಡಿಕೆಗಳನ್ನು ಹರಿದೆಸೆದಿದ್ದರು. ನಿಮ್ಮ ಗುರುವಿನ ಈ ರೀತಿಯಿಂದ ನೀವೂ ಪಾಠ ಕಲಿಯಿರಿ ಎಂದು ಚೀನಾಕ್ಕೆ ಹೇಳಬೇಕು.'

ಮನ್ಸಾರ್ ಭಾರತದ ಭಾಗ ಎಂದು ತೋರಿಸಿದ ಲೋಹಿಯಾ, ಒಂದು ಭೂಪ್ರದೇಶದ ಜನಮಾನಸದ ಸಂಸ್ಕೃತಿಯಲ್ಲಿರುವ ಪ್ರಾಥಮಿಕ ಅಂಶವೊಂದರ ಬಗ್ಗೆ ಚೀನೀಯರ ಹಾಗೂ ಭಾರತೀಯರ ಗಮನ ಸೆಳೆದರು: 'ಕೈಲಾಸ ಪರ್ವತದ ಸುತ್ತ ಶಿವ, ಪಾರ್ವತಿಯರಂಥ ಮೂಲ ದೇವ ದೇವಿಯರನ್ನು ಸೃಷ್ಟಿಸಿಕೊಂಡ ಯಾವ ಜನಸಮುದಾಯವೂ ಇಂಥ ಕತೆಗಳನ್ನು ಎಂದೂ ವಿದೇಶದಲ್ಲಿ ಸೃಷ್ಟಿಸಿದ ಉದಾಹರಣೆಯಿಲ್ಲ!'

ಕಾಳಿದಾಸನ 'ಕುಮಾರ ಸಂಭವ' ಕೃತಿಯ ಆರಂಭದ ಸಾಲುಗಳನ್ನು ಕೂಡ ಲೋಹಿಯಾ ಉಲ್ಲೇಖಿಸಿದರು. 'ಉತ್ತರ ದಿಕ್ಕಿನಲ್ಲಿ ಹಿಮಾಲಯ ಎಂಬ ಹೆಸರುಳ್ಳ ಪರ್ವತರಾಜನಿದ್ದಾನೆ ಎಂದು ಶುರುವಾಗುವ ಈ ಶ್ಲೋಕ... ಹಿಮಾಲಯಕ್ಕೆ ಇಡೀ ಪ್ರಪಂಚದ ದೃಷ್ಟಿಯಲ್ಲಿ ಎಂಥ ಗಟ್ಟಿಯಾದ, ಅಗ್ಗಳಿಕೆಯ ಸ್ಥಾನವಿದೆ ಎಂಬುದನ್ನು ಹೇಳುತ್ತದೆ.'

ಈ ಶ್ಲೋಕವನ್ನು ಉಲ್ಲೇಖಿಸಿದ ಲೋಹಿಯಾ, 'ಚೀನೀ ಸಾಹಿತ್ಯದಲ್ಲಿ, ಐತಿಹ್ಯಗಳಲ್ಲಿ ಹಿಮಾಲಯದ ಬಗ್ಗೆ ಏನಾದರೂ ಇದೆಯೆ, ಹುಡುಕಿ ಕೊಡಿ' ಎಂದು ಅನೇಕ ಅಧ್ಯಾಪಕ ಮಿತ್ರರನ್ನು ಕೇಳಿಕೊಂಡರು. ಯಾರೂ ಹುಡುಕಿ ಕೊಡಲಿಲ್ಲ. ಆಗ ಲೋಹಿಯಾಗೆ ಅಂಥ ಚೀನೀ ಸಾಹಿತ್ಯವೇ ಇರಲಿಕ್ಕಿಲ್ಲ ಎನ್ನಿಸಿತು. ಕೊನೆಗೆ, 'ಚೀನೀಯರು ತಮ್ಮ ಭಾಷೆಯಲ್ಲಿ ಕಾಳಿದಾಸನ ಪದ್ಯದ ಅರ್ಧದಷ್ಟಾದರೂ ಸುಂದರವಾಗಿರುವ ಪದ್ಯವನ್ನು ಸೃಷ್ಟಿಸಲಿ' ಎಂದು ಲೋಹಿಯಾ ಸವಾಲೆಸೆದರು!

ಹೀಗೆ ಚರಿತ್ರೆ, ಸಂಸ್ಕೃತಿಗಳ ಅಧ್ಯಯನ, ಭೂಪಟಗಳು, ಸಾಹಿತ್ಯ ಕೃತಿಗಳು ಎಲ್ಲದರ ಮೂಲಕ ಹಿಮಾಲಯ ಪ್ರದೇಶಕ್ಕೂ ಭಾರತಕ್ಕೂ ಇರುವ ಸಾವಿರಾರು ವರ್ಷಗಳ ಸಾಂಸ್ಕೃತಿಕ ನಂಟನ್ನು ಲೋಹಿಯಾ ಖಚಿತವಾಗಿ ತೋರಿಸಿಕೊಟ್ಟರು. ಇದು ಅಂದು ಭಾರತ ಎದುರಾಗಿದ್ದ ಮಹತ್ವದ ಬಿಕ್ಕಟ್ಟೊಂದನ್ನು ಕುರಿತ ಗಂಭೀರವಾದ ಬಹುಶಿಸ್ತೀಯ ಅಧ್ಯಯನವಾಗಿತ್ತು.

ಮನ್ಸಾರ್ ಕುರಿತಂತೆ ಕೊನೆಗೂ ಭಾರತ ಸರ್ಕಾರ ಎಚ್ಚೆತ್ತುಕೊಂಡಿತು.

ಆಗ ಲೋಹಿಯಾ ಬರೆದರು: 'ಮನ್ಸಾರ್ ಮೇಲೆ ತನ್ನ ಸಾರ್ವಭೌಮ ಪ್ರಭುತ್ವವನ್ನು ಸಾರಿದ್ದಕ್ಕಾಗಿ ನಾನು ಭಾರತ ಸರ್ಕಾರವನ್ನು ಅಭಿನಂದಿಸುತ್ತೇನೆ. ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ನಾನು ಮಾಡುವ ಕೆಲಸದ ಬಗ್ಗೆ ನಾನು ಈ ಕಾಲದ ಮೆಚ್ಚುಗೆಯನ್ನೇನೂ ನಿರೀಕ್ಷಿಸುವುದಿಲ್ಲ. ಆದರೆ ಈ ವಿಷಯವನ್ನು ಮೊದಲು ನನಗೆ ತಿಳಿಸಿದ ಸರ್ದಾರ್ ರಾಮ್ ಸಿಂಗ್ ಅವರಿಗೆ ಭಾರತದ ಜನ ಕೃತಜ್ಞರಾಗಿರಬೇಕು.'

ತಮ್ಮ ಸತತ ಅಧ್ಯಯನಗಳ ಆಧಾರದಿಂದ ಲೋಹಿಯಾ ತಲುಪಿದ ನಿಲುವು ಇದು: 'ಮೆಕ್‌ಮೋಹನ್ ಗಡಿರೇಖೆಯು ಭಾರತ ಹಾಗೂ ಸಾರ್ವಭೌಮ ಟಿಬೆಟ್ ನಡುವಣ ನ್ಯಾಯಯುತ ಗಡಿರೇಖೆಯಾಗಿರಬೇಕು; ಚೀನಾ ಮತ್ತು ಭಾರತಗಳ ಗಡಿರೇಖೆ ಅಲ್ಲಿಂದ ಉತ್ತರಕ್ಕೆ 70ರಿಂದ 100 ಮೈಲು ದೂರದಲ್ಲಿ ಇರಬೇಕಾಗುತ್ತದೆ.'

ಹೀಗೆ ಲೋಹಿಯಾ ಏಕಕಾಲಕ್ಕೆ ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರಗಳನ್ನು ಅಂಕಿ ಅಂಶ, ದಾಖಲೆಗಳ ಸಮೇತ ವಿಶ್ಲೇಷಿಸಬಲ್ಲವರಾಗಿದ್ದರು. ಚೀನಾ ಕುರಿತ ಲೋಹಿಯಾ ಚಿಂತನೆಯ ಮಹತ್ವ ಆ ಕಾಲದ ಭಾರತಕ್ಕೆ ಸರಿಯಾಗಿ ಅರ್ಥವಾಗಲಿಲ್ಲ. ಅವರ ಚಿಂತನೆಯನ್ನು ಸರ್ಕಾರ, ರಾಜಕೀಯ ಪಕ್ಷಗಳು ಹಾಗೂ ಪತ್ರಿಕೆಗಳು ಉಪೇಕ್ಷಿಸುತ್ತಲೇ ಇದ್ದವು.

ಮಹತ್ವದ ರಾಷ್ಟ್ರೀಯ ಸಮಸ್ಯೆಗಳ ಸಂದರ್ಭಗಳಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎಂಬ ಗಡಿಗೆರೆಗಳು ಅಳಿಸಿಹೋಗಿ ಸಾಮೂಹಿಕ ಹುಡುಕಾಟ ಆರಂಭವಾಗಬೇಕಾದ ಅಗತ್ಯ, ಸಾಧ್ಯತೆ ಎರಡೂ ಅಂದು ಇದ್ದವು. ವಿದ್ವಾಂಸರಾಗಿದ್ದ ನೆಹರೂಗೆ ಲೋಹಿಯಾರ ಜ್ಞಾನದ ಆಳ, ಸಂಶೋಧನಾ ಸಾಮರ್ಥ್ಯಗಳ ಅರಿವಿತ್ತು. ನೆಹರೂ ಕೋರಿಕೆಯ ಮೇರೆಗೇ ಲೋಹಿಯಾ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಕಾಂಗ್ರೆಸ್ ಪಕ್ಷದ ವಿದೇಶಾಂಗ ವ್ಯವಹಾರಗಳ ವಿಭಾಗವನ್ನು ನೋಡಿಕೊಂಡಿದ್ದರು. ಆದರೆ ಸ್ವಾತಂತ್ರ್ಯದ ನಂತರದ ಭಾರತದಲ್ಲಿ ರಾಜಕೀಯ ಪಕ್ಷಗಳ ನಡುವೆ ಗಡಿಗೆರೆಗಳಿದ್ದವು; ಹೀಗಾಗಿ, ಲೋಹಿಯಾ ಚಿಂತನೆಗಳನ್ನು ಒಪ್ಪಲಾಗದ ಮಾನಸಿಕ ತಡೆಯೊಂದು ನೆಹರೂರಲ್ಲಿ ನಿರ್ಮಾಣವಾದಂತಿದೆ.

***

ಚೀನಾದ ನಡೆಗಳ ಬಗ್ಗೆ ಭಾರತ ಸರ್ಕಾರಕ್ಕೆ ಅರಿವಿರಲಿಲ್ಲವೆಂದಲ್ಲ. 1961ರ ಡಿಸೆಂಬರ್ 7ರಂದು ಪಾರ್ಲಿಮೆಂಟಿನಲ್ಲಿ ಮಾತಾಡುತ್ತಾ ನೆಹರು ಹೇಳಿದ್ದರು: 'ನಮ್ಮ ಗಡಿಯಲ್ಲಿ ಭಾರಿ ಆನೆಯೊಂದು ಕೂತಿರುವುದು ವಾಸ್ತವ; ಅದನ್ನು ನಾವು ಕಡೆಗಣಿಸಲಾಗದು.' ಅವತ್ತು ರೂಪಕದ ಭಾಷೆಯಲ್ಲಿ ಮಾತಾಡುವುದು ನೆಹರೂಗೆ ಅನಿವಾರ್ಯವಾಗಿತ್ತು. ಅಂತರರಾಷ್ಟ್ರೀಯ ವಿಚಾರಗಳ ಬಗ್ಗೆ ಪ್ರಧಾನಮಂತ್ರಿಯೊಬ್ಬರು ದೇಶದ ಪಾರ್ಲಿಮೆಂಟಿನಲ್ಲಿ ಮಾತಾಡುವಾಗ ಹಲ ಬಗೆಯ ಎಚ್ಚರ ವಹಿಸಬೇಕಾಗುತ್ತದೆ. ಇದು ಮುತ್ಸದ್ದಿ ನೆಹರೂಗೆ ಗೊತ್ತಿತ್ತು.

ಜೊತೆಗೆ, 'ಅಭಿವೃದ್ಧಿಯತ್ತ ತೀವ್ರ ಗಮನ ಕೊಡಬೇಕಾದ ದೇಶ ಯುದ್ಧದೆಡೆಗೆ ಮುಖ ಮಾಡಿದರೆ ನಷ್ಟಕ್ಕೀಡಾಗುತ್ತದೆ' ಎಂಬುದು ನೆಹರು ನಂಬಿಕೆಯಾಗಿತ್ತು. ಮಿತ್ರತ್ವದ ಬಲದಿಂದಲೇ ಈ ಸವಾಲನ್ನು ಎದುರಿಸಬೇಕೆಂದು ನೆಹರು ತೀರ್ಮಾನಿಸಿದರು. ಚೀನಾಕ್ಕೆ ವಿಶ್ವಸಂಸ್ಥೆಯಲ್ಲಿ ಸ್ಥಾನ ಒದಗಿಸಿಕೊಡುವ ನೆಹರು ಪ್ರಯತ್ನ ಕೂಡ ಅವರ ಶಾಂತಿಮಾರ್ಗದ ಭಾಗವಾಗಿತ್ತು.

ಆದರೆ 20 ಅಕ್ಟೋಬರ್ 1962ರಂದು ಚೀನಾ ಭಾರತದ ಗಡಿ ಪ್ರದೇಶದಲ್ಲಿ ಮುಂದಡಿ ಇಡತೊಡಗಿತು. ದೇಶಾದಲ್ಲಿ ಕೋಲಾಹಲವೆದ್ದಿತು. ವಿರೋಧ ಪಕ್ಷಗಳು ನೆಹರುವನ್ನು ಹಣಿಯಲು ಈ ಸಮಯವನ್ನು ಬಳಸಿಕೊಂಡವು. ನೆಹರು ತಕ್ಷಣ ಕಾರ್ಯಪ್ರವೃತ್ತರಾದರು. 'ಪರಿಸ್ಥಿತಿ ನಿಜಕ್ಕೂ ಕಳವಳಕಾರಿಯಾಗಿದೆ' ಎಂದು ಅಮೆರಿಕದ ಅಧ್ಯಕ್ಷ ಜಾನ್ ಎಫ್. ಕೆನಡಿಗೆ ಎರಡು ಪತ್ರಗಳನ್ನು ಬರೆದು ಬಹು ಸಾಮರ್ಥ್ಯದ ಮಿಲಿಟರಿ ನೆರವನ್ನು ಕೋರಿದರು. ಬ್ರಿಟನ್ನಿನ ನೆರವನ್ನೂ ಕೋರಿದರು.

ಮುಂದಿನ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಚೀನಾ ತನ್ನ ಸೇನೆಯನ್ನು ಹಿಂತೆಗೆದುಕೊಳ್ಳುತ್ತಿದ್ದೇನೆಂದು ಏಕಪಕ್ಷೀಯವಾಗಿ ಘೋಷಿಸಿ ಹಿಂದೆ ಸರಿಯಿತು. ಬಿಪಿನ್ ಚಂದ್ರ ಮತ್ತು ಸಹ ಲೇಖಕರು ಬರೆದ 'ಇಂಡಿಯಾ ಆಫ್ಟರ್ ಇಂಡಿಪೆಂಡೆನ್ಸ್' ಪುಸ್ತಕ ಈ ವಿವರಗಳನ್ನು ದಾಖಲಿಸಿದೆ.

ಗಡಿ ಪ್ರದೇಶದಿಂದ ಚೀನಾ ಹಿಂದೆಗೆದದ್ದು ಅದರ ಒಟ್ಟು ಕಾರ್ಯಯೋಜನೆಯ ಭಾಗದಂತೆ ಲೋಹಿಯಾಗೆ ಕಂಡಿತು. ಭಾರತದ ನೆಲದಿಂದ ತನ್ನ ಸೇನೆ ಹಿಂದೆ ಸರಿದ ನಂತರ ನವೆಂಬರ್ ತಿಂಗಳಲ್ಲಿ ಚೀನಾ ಸರ್ಕಾರ ಕೊಟ್ಟ ಹೇಳಿಕೆಯಲ್ಲಿ ಭಾರತವೇ ಈ ಆಕ್ರಮಣವನ್ನು ಪ್ರಚೋದಿಸಿದೆ ಎಂಬ ವಾದವಿದ್ದುದನ್ನು ಲೋಹಿಯಾ ಗಮನಿಸಿದರು. ಈ ಹೇಳಿಕೆಯಲ್ಲಿ 'ಅಮೆರಿಕದಂಥ ಸಾಮ್ರಾಜ್ಯಶಾಹಿ ರಾಷ್ಟ್ರವು ಏಷ್ಯನ್ನರು ಏಷ್ಯನ್ನರ ವಿರುದ್ಧ ಹೋರಾಡುವಂತೆ ಮಾಡುತ್ತಿದೆ' ಎಂಬ ಚೀನಾ ಸರ್ಕಾರದ ವಾದವೂ ಇತ್ತು.

ಈ ಹಿನ್ನೆಲೆಯಲ್ಲಿ, ಚೀನಾದ 'ಒಂದು ಮಟ್ಟದ ಹಿಂದೆಗೆತ'ವನ್ನು ಲೋಹಿಯಾ ಹೀಗೆ ವ್ಯಾಖ್ಯಾನಿಸಿದರು: 'ಸದ್ಯಕ್ಕೆ ಭಾರತದ ಜನರ ಇಚ್ಛಾಶಕ್ತಿಯನ್ನು ಸಾಕಷ್ಟು ಇಂಗಿಸಿ, ಸರ್ಕಾರ, ಸೇನೆಗಳನ್ನು ಕೊಂಚ ಅಸ್ತವ್ಯಸ್ತಗೊಳಿಸುವ ಮಟ್ಟಕ್ಕೆ ಚೀನಾ ತೃಪ್ತವಾದಂತಿದೆ.'

ಇಂಥ ಸನ್ನಿವೇಶದಲ್ಲಿ 'ಜನರು ಕೇವಲ ಭಾವನಾತ್ಮಕ ಚೀರಾಟದಲ್ಲಿ ಕೊನೆಗೊಳ್ಳದೆ, ಜಾಣ ರೀತಿಯಲ್ಲಿ ಎಚ್ಚರಗೊಳ್ಳಬೇಕು; ಇಲ್ಲದಿದ್ದರೆ ಯಾವ ಭರವಸೆಯೂ ಉಳಿಯಲಾರದು' ಎಂದು ಲೋಹಿಯಾ ಎಚ್ಚರಿಸಿದರು. ಚೀನಾಕ್ಕೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಸದಸ್ಯತ್ವ ದೊರಕಿಸಿಕೊಡುವ ಮೂಲಕ ಚೀನಾವನ್ನು ಬಗ್ಗಿಸಬಹುದೆಂದು ಹೊರಟಿರುವ ಭಾರತದ ಪ್ರಯತ್ನ 'ಠೊಳ್ಳು' ಎಂದು ಕೂಡ ಟೀಕಿಸಿದರು.

'ನಾನು ಅಹಿಂಸಾವಾದಿಯಾಗಿದ್ದರೂ, ನನ್ನ ದೇಶದ ಮೇಲೆ ಇತರರು ಆಕ್ರಮಣ ಮಾಡಿದಾಗ ಶಸ್ತ್ರಾಸ್ತ್ರಗಳನ್ನು ಬಳಸಲು ಹಿಂಜರಿಯುವುದಿಲ್ಲ' ಎಂದು ಈ ಘಟ್ಟದಲ್ಲಿ ಹೇಳಿದ ಲೋಹಿಯಾ, ಹಿಂಸೆ–ಅಹಿಂಸೆಗಳನ್ನು ಕುರಿತ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು:

'ದೇಶದ ಆಂತರಿಕ ವಿಷಯಗಳಲ್ಲಿ ಪ್ರತಿಭಟನೆ ಹಾಗೂ ಅಹಿಂಸಾ ವಿಧಾನಗಳು ಒಟ್ಟೊಟ್ಟಿಗೇ ಹೋಗಬಲ್ಲವು. ಆದರೆ ಅಂತರರಾಷ್ಟ್ರೀಯ ವಿಚಾರಗಳಲ್ಲಿ ಅವನ್ನು ಬೆಸೆಯುವ ಮಾರ್ಗ ಇನ್ನೂ ಕಂಡಿಲ್ಲ. ಒಮ್ಮೆ ಯುದ್ಧ ಶುರುವಾಯಿತೆಂದರೆ, 'ರೋಗಪರಿಹಾರಕ' ಅಹಿಂಸೆ ಎನ್ನುವುದು ಇರುವುದಿಲ್ಲ. ಪ್ರಾಯಶಃ, ಯುದ್ಧ ಶುರುವಾಗದಂತೆ ತಡೆಯುವ, ಅಥವಾ ಜನ ಸಶಸ್ತ್ರ ಸೇನಾಬಲಗಳ ಹಂಗಿಲ್ಲದೆ ಬದುಕುವ